# ಅಭಿನಯದಿಂದಲೇ ನಟನ ಸಾಮರ್ಥ್ಯ ತೋರಿಸಬೇಕು

**ಗಜೇಂದ್ರ ಮರಸಣಿಗೆ**

ಝೀ ಕನ್ನಡದ 'ಪುಟ್ಟಕ್ಕನ ಮಕ್ಕಳು' ಧಾರಾವಾಹಿಯ ಮುಂಗುಸಿ



◆ **ನಿಮ್ಮ ಪರಿಚಯ ಹೇಳಿ**

ಕಳಸ ಸಮೀಪದ ಕೆಳಮರಸಣಗಿ ಊರು. ದಟ್ಟ ಕಾನನದ ಪುಟ್ಟ ಊರು. ಸಾರಿಗೆ ಸಂಪರ್ಕ ಅಷ್ಟಕ್ಕಷ್ಟೆ. ತಂದೆ ಕೃಷ್ಣಪ್ಪ, ತಾಯಿ ಯಶೋದಾ. ಅಣ್ಣ, ತಂಗಿ ಇದ್ದಾರೆ. ಸಂಸೆಯಲ್ಲಿ ಮಾಧ್ಯಮಿಕ, ಪ್ರೌಢಶಾಲೆಯನ್ನು ಕಳಸದಲ್ಲಿ ಓದಿದೆ. ಅಪ್ಪ–ಅಮ್ಮ ಕೂಲಿ ಮಾಡುತ್ತಿದ್ದರು. ಐದನೇ ತರಗತಿಯಿಂದಲೂ ಉಚಿತ ಹಾಸ್ಟೆಲ್‌ನಲ್ಲಿ ವಾಸ್ತವ್ಯ ಮಾಡಿದ್ದೆ. ಓದುವಾಗ ಪ್ರತಿಭಾ ಕಾರಂಜಿಯಲ್ಲಿ ಭಾಗವಹಿಸುತ್ತಿದ್ದೆ. ಜೊತೆಗೆ ಕ್ರೀಡಾ ಕೂಟದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದೆ. ಓದುವುದಕ್ಕಿಂತ ಇಂತಹ ಪಠ್ಯೇತರ ಚಟುವಟಿಕೆಗಳು ಖುಷಿ ಕೊಡುತ್ತಿದ್ದವು.

◆ **ರಂಗಭೂಮಿಯ ಮೋಹ ಹುಟ್ಟಿದ್ದು ಹೇಗೆ?**

ಹಾಸ್ಟೆಲ್‌ನಲ್ಲಿ ಕೂಡ ಮಿಮಿಕ್ರಿ ಮಾಡ್ತಿದ್ದೆ. ಹಾಸ್ಯ ಸಿನಿಮಾಗಳನ್ನು ಹೆಚ್ಚು ನೋಡುತ್ತಿದ್ದೆ. ವರ್ತಮಾನ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಸಿನಿಮಾ ಸಂಬಂಧಿತ ಬರಹ–ಫೋಟೊಗಳನ್ನು ಕತ್ತರಿಸಿಕೊಳ್ಳುತ್ತಿದ್ದೆ. ನಮ್ಮ ಶಿಕ್ಷಕರು 'ನಿನಗೆ ಓದಿನ ಬಗ್ಗೆ ಆಸಕ್ತಿ ಇಲ್ಲ. ಯಾವುದಾದರೂ ನಾಟಕದ ಕಂಪನಿಗೆ ಸೇರು' ಎಂದು ಹಂಗಿಸುತ್ತಿದ್ದರು. 10ನೇ ತರಗತಿ ಪಾಸ್ ಆದ ಮೇಲೆ ಕಳಸದಲ್ಲೇ ಕಾಲೇಜಿಗೆ ಸೇರಿದೆ. ಕಾಲೇಜು ಮಕ್ಕಳಿಗೆ ಅಲ್ಲಿ ಹಾಸ್ಟೆಲ್ ಸೌಲಭ್ಯ ಇರಲಿಲ್ಲ. ಅಡುಗೆ ಸಿಬ್ಬಂದಿಗೆ ಸಹಾಯ ಮಾಡಿಕೊಂಡು ಅಲ್ಲೇ ಉಳಿದುಕೊಂಡೆ. ಹೇಗೋ ಎರಡು ವರ್ಷ ಮುಗೀತು. ಮೂಡಿಗೆರೆಗೆ ಡಿಗ್ರಿ ಕಾಲೇಜಿಗೆ ಹೋಗಬೇಕು ಎನ್ನುವ ಯೋಚನೆಯಲ್ಲಿ ಇದ್ದೆ. ಅದೇ ಸಮಯದಲ್ಲಿ ಊರಲ್ಲಿ ಒಂದು ಮದುವೆ ಇತ್ತು. ಮದುವೆಗೆಂದು ಬೇರೆಯವರ ಮನೆಗೆ ಹೋಗಿದ್ದೆ. ಅವರ ಮನೆಯ ಸೂರಿನಲ್ಲಿ ಒಂದು ಪತ್ರಿಕೆಯನ್ನು ಯಾರೋ ಸಿಕ್ಕಿಸಿದ್ದರು. ಅದನ್ನು ಬಿಚ್ಚಿ ನೋಡಿದೆ. ಅದರಲ್ಲಿ ನೀನಾಸಂ ರಂಗ ಅಧ್ಯಯನಕ್ಕೆ ಅರ್ಜಿಯನ್ನು ಆಹ್ವಾನಿಸಿದ್ದರು. ಅದು ನನಗೆ ರಂಗ ಶಿಕ್ಷಣಕ್ಕೆ ಕಾರಣವಾಯಿತು.

◆ **ನಟನೆಯನ್ನೇ ವೃತ್ತಿಯಾಗಿ ಮಾಡಿಕೊಂಡಿದ್ದು ಹೇಗೆ?**

ನೀನಾಸಂ ಸಂದರ್ಶನಕ್ಕೆ ಕರೆದಿದ್ದರು. ಸುಮಾರು 500 ಜನ ಬಂದಿದ್ದರು. ಮಳೆಗಾಲದ ಆ ಸಮಯದಲ್ಲಿ ಕಳಸದಿಂದ ಬರುವ ಹೊತ್ತಿಗೆ ತಡವಾಗಿತ್ತು. ಅಲ್ಲಿ ಟೆಲಿಫಿಲ್ಮ್ ಒಂದನ್ನು ತೋರಿಸಿ ವೀಕ್ಷಕರಿಂದ ಪ್ರತಿಕ್ರಿಯೆ ಕೇಳುತ್ತಿದ್ದರು. ನಾನು ತಡವಾಗಿ ಹೋಗಿದ್ದರಿಂದ ಫಿಲ್ಮ್ ನೋಡಿರಲಿಲ್ಲ. ನಾನೂ ಅಭಿಪ್ರಾಯ ಹೇಳ್ತೀನಿ ಅಂದೆ. ಹೇಗೆ ಹೇಳ್ತಿಯಾ ಸಿನಿಮಾ ನೋಡಿಲ್ಲ ಅಂದ್ರು. ಇವರೆಲ್ಲ ಹೇಳಿದ್ದನ್ನು ಕೇಳಿಸಿಕೊಂಡಿದ್ದೇನೆ. ಅದರ ಮೇಲೆ ಹೇಳುತ್ತೇನೆ ಎಂದೆ ಅಲ್ಲಿ ನೆರೆದಿದ್ದ ಎಲ್ಲರೂ ಗೊಳ್ಳೆಂದು ನಕ್ಕರು. ನನಗೆ ತುಂಬ ಮುಜುಗರ ಆಯಿತು. ನನಗೆ ಅವಕಾಶವೂ ಸಿಕ್ಕಿತು. ಒಂದು ವರ್ಷದ ಡಿಪ್ಲೊಮಾ ಮುಗಿದ ನಂತರ ತಿರುಗಾಟಕ್ಕೆ ಕರೆದರು. ನಾಲ್ಕು ವರ್ಷ ನೀನಾಸಂ ತಿರುಗಾಟದ ಮೂಲಕ ರಾಜ್ಯವನ್ನು ಸುತ್ತುವ ಅವಕಾಶ ಸಿಗುತ್ತದೆ. ನಟನೆ ಬಿಟ್ಟು ಬೇರೆ ಗೊತ್ತಿರಲಿಲ್ಲ. ಅದಾದ ಮೇಲೂ ಏನು ಮಾಡಬೇಕು ಎಂದು ಗೊತ್ತಾಗಲಿಲ್ಲ. ಸಿನಿಮಾ ರಂಗಕ್ಕೆ ಬರುವ ಆಸೆ ಮೊದಲಿನಿಂದ ಇದ್ದಿದ್ದರಿಂದ ಸೀರಿಯಲ್ ಕಡೆ ಗಮನವನ್ನು ನೀಡಿದೆ. ಗೆಳೆಯ ಪ್ರಶಾಂತ ವರ್ಧಮಾನ್, 'ಪ್ರೀತಿಯಿಂದ' ಧಾರಾವಾಹಿ ಮಾಡುತ್ತಿದ್ದ ಅಶೋಕ್ ಕಶ್ಯಪ್ ಅವರನ್ನು ಪರಿಚಯಿಸಿದರು. ಅದರಲ್ಲಿ ಒಂದು ಪಾತ್ರಕ್ಕೆ ಅವಕಾಶ ಸಿಕ್ಕಿತು. ಸುವರ್ಣದಲ್ಲಿ 'ಅಣ್ಣತಂಗಿ', 'ಪಾರ್ವತಿ ಪರಮೇಶ್ವರ' ಇದರ ಜೊತೆಗೆ 'ಕ್ರೇಜಿಲೋಕ' ಸಿನಿಮಾ ಮಾಡಿದೆ. 'ಪರಿಣಿತ', 'ಅನುಬಂಧ'ದಲ್ಲಿ ಮಾಡಿದೆ. ಮತ್ತೆ 'ಮನೋರೂಪ' ಸಿನಿಮಾದಲ್ಲಿ ನೆಗೆಟಿವ್ ಪಾತ್ರ ಸಿಕ್ಕಿತು. ಇಷ್ಟಾದರೂ ಅವಕಾಶಕ್ಕಾಗಿ ಅಲೆಯುವ ಪರಿಸ್ಥಿತಿ ಇತ್ತು. ಆ ಸಮಯಕ್ಕೆ 'ಕಾಮಿಡಿ ಕಿಲಾಡಿಗಳು' ಆಡಿಷನ್ ನೀಡಿದೆ ಅವಕಾಶ ಸಿಗಲೇ ಇಲ್ಲ. ಡ್ರಾಮಾ ಜೂನಿಯರ್ಸ್‌ಗೆ ಮಕ್ಕಳನ್ನು ಆಡಿಷನ್ ಮಾಡಲು ನನ್ನನ್ನು ಕರೆದರು. ಆ ಅವಧಿಯಲ್ಲಿ 'ಕಾಮಿಡಿ ಕಿಲಾಡಿಗೆ ಆಡಿಷನ್ ಕರೀತಾರೆ ನೀನು ಭಾಗವಹಿಸು' ಎಂದರು.

◆ **'ಪುಟ್ಟಕ್ಕನ ಮಕ್ಕಳು'ನಲ್ಲಿ ನಿಮ್ಮ ಪಾತ್ರ ಹೇಗಿದೆ?**

ಹೀರೊನ ಗೆಳೆಯನಾಗಿ ಕಾಣಿಸಿಕೊಂಡಿದ್ದೇನೆ. ಮಲೆನಾಡಿನವನಾದ ನಾನು ಮಂಡ್ಯ ಭಾಷೆಯಲ್ಲಿ ವ್ಯವಹರಿಸಬೇಕು. ಆ ಭಾಷೆ ಪ್ರಯೋಗ ಮಾಡುತ್ತಿರುವುದು ಹೊಸತು. ಈ ಮೊದಲು ಕುಡುಕನ ಪಾತ್ರದಿಂದ ಗುರುತಿಸುತ್ತಿದ್ದ ಜನ ಮುಂಗುಸಿ ಎಂದು ಗುರುತಿಸುತ್ತಿದ್ದಾರೆ.

ಪ್ರಧಾನ ಪಾತ್ರ ಸಿಕ್ಕಿಲ್ಲ. ಅದಕ್ಕೂ ಬಾಡಿ ಸಹಕಾರ ಬೇಕು ಅಂತ ಅನ್ನಿಸುತ್ತದೆ. ರಂಗಭೂಮಿ ಹಿನ್ನೆಲೆ ಇರುವುದರಿಂದ ಎಲ್ಲ ರೀತಿಯ ಪಾತ್ರಗಳನ್ನು ನಿರ್ವಹಿಸುವ ಸಾಮರ್ಥ್ಯ ಇದೆ. ಸಮಯಕ್ಕಾಗಿ ಕಾಯುತ್ತಿದ್ದೇನೆ. ಭಿನ್ನ ಪಾತ್ರವನ್ನು ಮಾಡಿ ನಾನೇನು ಅನ್ನುವುದನ್ನು ತೋರಿಸಬೇಕಿದೆ. ನನಗೆ ಗಂಭೀರ ಮತ್ತು ನೆಗೆಟಿವ್ ಪಾತ್ರ ತುಂಬ ಇಷ್ಟ. ಆದರೆ ಕಾಮಿಡಿ ಪಾತ್ರಗಳನ್ನು ಹೆಚ್ಚು ನಿರ್ವಹಿಸುತ್ತಿದ್ದೇನೆ. ಭಿನ್ನತೆ ಎನ್ನುವುದು ನನಗೆ ಇಷ್ಟ. ಒಬ್ಬ ರೋಗಿ ಆದರೂ ಅಡ್ಡಿ ಇಲ್ಲ. ನಟನೆಗೆ ಅವಕಾಶ ಇರುವ ಯಾವ ಪಾತ್ರಕ್ಕೂ ಸೈ. ಅಭಿನಯ ನೈಜವಾಗಿ ಇರಬೇಕು, ಸಾತ್ವಿಕವಾಗಿ ಮಾಡಬೇಕು.

■ **ರಾಘವೇಂದ್ರ ಕೆ.**